ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 637/2022

ಸಿ ಡಬ್ಲ್ಯೂ– 8

ಪಿ ಡಬ್ಲ್ಯೂ– 6

ದಿಃ 22–12–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಸೂರಜ್ ತಂಡೇಲ್ |
| ತಂದೆಯ ಹೆಸರುಃ | ದಯಾ ತಾಂಡೇಲ್ |
| ವಯಸ್ಸುಃ | 26 ವರ್ಷ |
| ಉದ್ಯೋಗಃ | ಮೀನುಗಾರಿಕೆ |
| ವಿಳಾಸಃ | ಮಂಜಗುಣಿ, ಅಂಕೋಲಾ. |

<u>ಮುಖ್ಯ ವಿಚಾರಣೆಃ</u> ಮಾನ್ಯ ಎ ಪಿ ಪಿ ರವರಿಂದಃ

(Accused No.2 is absent. Since there is no dispute, hence, with the consent of counsel for accused, the evidence has been recorded.)

ಚಾಸಾ–1 ಮತ್ತು 4 ರವರ ಪರಿಚಯವಿರುವುದಿಲ್ಲ. ಅವರು ನಮ್ಮ ಊರಿಗೆ ಬಂದಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ–1 ರಲ್ಲಿ ಸಹಿ ಹಾಕಿದ ಪ್ರಶಾಂತ ರತ್ನಾಕರ ತಾಂಡೇಲ್ ಮತ್ತು ಯೋಗೇಶ ರತ್ನಾಕರ ತಾಂಡೇಲ್ ಇವರ ಪರಿಚಯವಿರುವುದಿಲ್ಲ. ಸಾಕ್ಷಿಯು ನಿಪಿ–1 ರಲ್ಲಿ ಸೌರಭ ದಾಯ ತಾಂಡೇಲ್ ಎಂದು ಇದ್ದು, ಆದರೆ ನನ್ನ ಹೆಸರು ಸೂರಜ್ ಎಂದು ಇದ್ದು, ನಾನು ನಿಪಿ–1 ರಲ್ಲಿ ಯಾವುದೇ ಸಹಿಯನ್ನು ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ಯಾವುದೇ

ಮಾಹಿತಿ ಇರುವುದಿಲ್ಲ. ನನಗೆ ಯಾವ ವಿಷಯಕ್ಕಾಗಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದು ಗೊತ್ತಿರುವುದಿಲ್ಲ, ಸಮನ್ಸ ಬಂದ ಕಾರಣ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಸಾಕ್ಷಿಯು ಮುದ್ದೆ ಮಾಲನ್ನು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ದಿಃ 28-05-2021 ರಂದು ಬೆಳಿಗ್ಗೆ 7.15 ಗಂಟೆಗೆ ನೀವು ನಿಮ್ಮ ಊರಿನ ಬಸ್ ನಿಲ್ದಾಣದ ಹತ್ತಿರ ಹೋದಾಗ ಅಲ್ಲಿ ಆಪಾ-1 ಮತ್ತು 4 ರವರು ನಿಮ್ಮ ಊರಿನಿಂದ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನೀವು ಅಲ್ಲಿ ಹೋಗಿ ನೋಡಿದಾಗ ಟಾಟಾ ಏಸ್ ವಾಹನದಲ್ಲಿ ಒಟ್ಟು 29 ಅಕ್ಕಿ ಚೀಲಗಳು ಇದ್ದವು ಎಂದರೆ ಗೊತ್ತಿರುವುದಿಲ್ಲ. ಒಟ್ಟು 8-9 ಕ್ವಿಂಟಲ್ ಇದ್ದವು ಎಂದರೆ ಗೊತ್ತಿರುವುದಿಲ್ಲ. ಸದರಿ ಟಾಟ ಏಸ್ ವಾಹನ ಸಂಖ್ಯೆ ಕೆ ಎ 30 ಎ 0066 ಆಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ಕಂದಾಯ ನಿರೀಕ್ಷಕರು ನಿಪಿ-1 ರಂತೆ ಪಂಚನಾಮೆಯನ್ನು ಮಾಡಿದ್ದು, ಅದಕ್ಕೆ ನೀವು ಸಹಿ ಹಾಕಿರುತ್ತೀರಿ ಎಂದರೆ ಸರಿಯಲ್ಲ. ದಿಃ28-05-2021 ರಂದು ಕಂದಾಯ ನಿರೀಕ್ಷಕರು ತಯಾರಿಸಿದ ಪಂಚನಾಮೆಯನ್ನು ಆ ದಿನ ಅಂದರೆ ದಿಃ30-05-2021 ರಂದು ನಿಮಗೆ ತೋರಿಸಿದ್ದು, ಅದರಲ್ಲಿರುವ

ಸಹಿಯನ್ನು ನೀವು ನಿಮ್ಮದೇ ಎಂದು ಗುರುತಿಸಿದ್ದು, ಪಂಚನಾಮೆಯಲ್ಲಿ ನಿಮ್ಮ ಹೆಸರು ಸೌರಭ ದಯಾ ತಾಂಡೇಲ್ ಎಂದು ತಪ್ಪಾಗಿ ನಮೂದು ಆಗಿದ್ದು, ನನ್ನ ಸರಿಯಾದ ಹೆಸರು ಸೂರಜ್ ದಯಾ ತಾಂಡೇಲ್ ಎಂದು ಆಗಿರುತ್ತದೆ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿರುತ್ತೀರಿ ಎಂದರೆ ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟು ನೀವು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು. ನಿಮಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದರೂ ಸಹ, ನೀವು ಪಂಚನಾಮೆಗೆ ಹೋಗಿ ಸಹಿ ಹಾಕಿದ್ದರೂ ಸಹ ಹಾಗೂ ಮದ್ದೆ ಮಾಲುಗಳನ್ನು ಗುರುತಿಸಿದ್ದರೂ ಸಹ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ ಎಂದು ತಿಳಿರುತ್ತಾರೆ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.